For more job news visit : www.kpscvaani.com

ಕರ್ನಾಟಕ ಸರ್ಕಾರದ ಸಚಿವಾಲಯ

ಬಹುಮಹಡಿ ಕಟ್ಟಡ, ಬೆಂಗಳೂರು–560 001

ಸಂಖ್ಯೆ: AGRI 8 AUD 2026 ದಿನಾಂಕ:06.05.2026

ಸುತ್ತೋಲೆ

ಪ್ರಸ್ತುತ ಕೃಷಿ ವಿಶ್ವವಿದ್ಯಾಲಯ, ಧಾರವಾಡ ಇಲ್ಲಿನ ಕುಲಪತಿಗಳಾದ ಡಾ॥ ಪಿ.ಎಲ್. ಪಾಟೀಲ್ ಇವರು ದಿನಾಂಕ: 22.05.2026 ರಂದು ವಯೋನಿವೃತ್ತಿ ಹೊಂದುತ್ತಿದ್ದು, ಕೃಷಿ ವಿಶ್ವವಿದ್ಯಾಲಯ, ಧಾರವಾಡ ಕುಲಪತಿಯವರ ಹುದ್ದೆಯನ್ನು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯಗಳ ಅಧಿನಿಯಮ, 2009ರ ಕಲಂ 27ರಲ್ಲಿ ವಿಧಿಸಿರುವ ಷರತ್ತು ಹಾಗೂ ನಿಬಂಧನೆಗಳಡಿ ಭರ್ತಿ ಮಾಡಬೇಕಾಗಿದೆ.

ಆದುದರಿಂದ, ಕೃಷಿ ವಿಶ್ವವಿದ್ಯಾಲಯ, ಧಾರವಾಡ ಇಲ್ಲಿನ ಕುಲಪತಿ ಹುದ್ದೆಗೆ ನೇಮಕ ಹೊಂದಲು ಬಯಸುವ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಪ್ರಾಧ್ಯಾಪಕ ಅಥವಾ ತತ್ಸಮಾನ ವೃಂದದಲ್ಲಿ 10 ವರ್ಷ ಅಥವಾ ಅದಕ್ಕೂ ಮೇಲ್ಪಟ್ಟ ಅವಧಿಗೆ ಸೇವೆ ಸಲ್ಲಿಸಿದ ಅಭ್ಯರ್ಥಿಗಳು ತಮ್ಮ ಸಂಪೂರ್ಣ ಸೇವಾ ವಿವರಗಳುಳ್ಳ ಅರ್ಜಿಗಳನ್ನು ಅಗತ್ಯವಾದ ಹೆಚ್ಚಿನ ವಿವರ / ದಾಖಲೆಗಳ 5 ಪ್ರತಿಗಳನ್ನು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕೃಷಿ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು–560 001 ರವರಿಗೆ ಈ ಅಧಿಸೂಚನೆ ಪ್ರಕಟವಾದ ದಿನಾಂಕದಿಂದ 15 ದಿನಗಳೊಳಗಾಗಿ ಕಳುಹಿಸತಕ್ಕದ್ದು.

ಅರ್ಜಿದಾರರು ಸಮುಚಿತ ಮಾರ್ಗದಲ್ಲಿ ಅರ್ಜಿಯನ್ನು ಸಲ್ಲಿಸಿ, ಅರ್ಜಿದಾರರ ವಿರುದ್ಧ ಇಲಾಖಾ ವಿಚಾರಣೆ / ಶಿಸ್ತು ಕ್ರಮ / ನ್ಯಾಯಾಂಗ ನಿಂದನೆ – ಬಾಕಿ ಇರುವ / ಇಲ್ಲದಿರುವ ದೃಢೀಕರಣದೊಂದಿಗೆ ಅರ್ಜಿಯನ್ನು ಸಲ್ಲಿಸತಕ್ಕದ್ದು. ಅರ್ಜಿ ನಮೂನೆಯ ಬಗ್ಗೆ ಹೆಚ್ಚಿನ ಮಾಹಿತಿಗಾಗಿ **www.uasd.edu** ಜಾಲತಾಣವನ್ನು ವೀಕ್ಷಿಸ ಬಹುದಾಗಿದೆ.

ಸಹಿ/–
(ಜೋನ್ ಪ್ರಕಾಶ್ ರೋಡ್ರಿಗಸ್)
ಸರ್ಕಾರದ ಅಧೀನ ಕೃಷಿ ಇಲಾಖೆ

ವಾಸಾಸಂಇ/ವಾಪ್ರ/ಜಿಎ/525/2026–27